ಬೆವಿಕಂ

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

## Bangalore Electricity Supply Company Limited

BESCOM

ಮುಖ್ಯ ಪ್ರಧಾನ ವ್ಯವಸ್ಥಾಪಕರು
(ನಿಗಮ ವ್ಯವಹಾರ)
ಬೆ.ವಿ.ಕಂ. ಕಂಪನಿ
ಕಾರ್ಯಾಲಯ,
ಕೆ.ಆರ್.ವೃತ್ತ, ಬೆಂಗಳೂರು.

## ಸುತ್ತೋಲೆ

**ವಿಷಯ** : ಮಾಹಿತಿ ಹಕ್ಕು ಅಧಿನಿಯಮ 2005 ರಡಿಯಲ್ಲಿ ಅರ್ಜಿದಾರರಿಗೆ ಮಾಹಿತಿ ನೀಡುವಾಗ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗು ಮೊದಲ ಮೇಲ್ಮನವಿ ಪ್ರಾಧಿಕಾರದ ವಿವರ ನೀಡುವ ಕುರಿತು.

**ಉಲ್ಲೇಖ** :1) ಕರ್ನಾಟಕ ಮಾಹಿತಿ ಆಯೋಗ ಮೇಲ್ಮನವಿ ಆದೇಶ ಸಂಖ್ಯೆ ಕೆ.ಐ.ಸಿ. 509 ಪಿ.ಟಿ.ಎನ್. 2012 ದಿ:22.11.2012

2) ಕರ್ನಾಟಕ ಮಾಹಿತಿ ಆಯೋಗದ ಆದೇಶ ಸಂಖ್ಯೆ ಕೆ.ಐ.ಸಿ. 396 ಪಿ.ಟಿ.ಎನ್. 2009 ದಿ:20.5.2009

3) ಕರ್ನಾಟಕ ಸರ್ಕಾರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸುತ್ತೋಲೆ ಸಂಖ್ಯೆ ಸಿಆಸುಇ:101: ಆರ್.ಟಿ.ಐ:2009 ದಿ:06.07.2009

## ಪ್ರಸ್ತಾವನೆ

ಉಲ್ಲೇಖ (1)ರ ಆದೇಶದಲ್ಲಿ ಕರ್ನಾಟಕ ಮಾಹಿತಿ ಆಯೋಗವು ಬೆ.ವಿ.ಕಂ.ನ ವಿವಿಧ ಕಛೇರಿಗೆ ಸಲ್ಲಿಸಲ್ಪಡುವ ಮಾಹಿತಿ ಹಕ್ಕು ಅಧಿನಿಯಮದಡಿಯ ಅರ್ಜಿಗೆ ಸಂಬಂಧಿತ ಸಾರ್ವಜನಿಕ ಮಾಹಿತಿ ಅಧಿಕಾರಿಯು ಮಾಹಿತಿ ಒದಗಿಸುವಾಗ ಅದರಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು ಮತ್ತು ಮೊದಲ ಮೇಲ್ಮನವಿ ಪ್ರಾಧಿಕಾರದ ವಿವರಗಳನ್ನು ನೀಡಿಲ್ಲದಿರುವುದನ್ನು ಗಮನಿಸಿ ವ್ಯವಸ್ಥಾಪಕ ನಿರ್ದೇಶಕ ರವರಿಗೆ ಈ ಕೆಳಕಂಡಂತೆ ನಿರ್ದೇಶಿಸುತ್ತಾರೆ.

> "Commission further directs the MD, BESCOM to issue circular instruction to all PIOs, under him to the effect that, the name and address of the first appellant authority should be invariably mentioned in all the information furnished."

ಮುಂದುವರೆದು, ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಸಲ್ಲಿಸಲ್ಪಡುವ ಅರ್ಜಿಗೆ ಮಾಹಿತಿ ಒದಗಿಸುವಾಗ ಅದರಲ್ಲಿ ಮಾಹಿತಿ ಒದಗಿಸುತ್ತಿರುವ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗು ಮೊದಲ ಮೇಲ್ಮನವಿ ಪ್ರಾಧಿಕಾರದ ವಿವರವನ್ನು ನೀಡುವಂತೆ ಉಲ್ಲೇಖ (2)ರ ಆಯೋಗದ ಆದೇಶ ಹಾಗು ಉಲ್ಲೇಖ (3)ರ ಆಯೋಗದ ಸುತ್ತೋಲೆಗಳಲ್ಲಿ ಈ ಕೆಳಕಂಡಂತೆ ನಿರ್ದೇಶನ ನೀಡಲಾಗಿರುತ್ತದೆ.

> "Commission further directs that in all communications with an RTI applicant, the name of the PIO, his phone number and address and also the name and address and telephone number of the First Appellate Authority must be mentioned."

ಈ ವಿಷಯವನ್ನು ಬೆ.ವಿ.ಕಂ.ನ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಗಮನಕ್ಕೆ ತರಲು ಸದರಿ ಸುತ್ತೋಲೆ.

**ಸುತ್ತೋಲೆ ಸಂಖ್ಯೆ : ಬೆ.ವಿ.ಕಂ./ಬಿ.ಸಿ-9/ಮು.ಪ್ರವ್ಯ(ನಿ.ವ್ಯ)/ಉ.ಪ್ರವ್ಯ(ಮಾ.ಹ.ಅ&ಸಾ.ಪ್ರ)/2012-13/ಸಿವೈಎಸ್-** 5706

**ದಿನಾಂಕ:** 06-02-2013

ಆಯೋಗದ ನಿರ್ದೇಶನದಂತೆ ಮಾಹಿತಿ ಹಕ್ಕು ಅಧಿನಿಯಮದಡಿ, ಅರ್ಜಿದಾರರಿಗೆ ಮಾಹಿತಿ ನೀಡುವಾಗ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು, ದೂರವಾಣಿ ಸಂಖ್ಯೆ ಮತ್ತು ಮೊದಲ ಮೇಲ್ಮನವಿ ಪ್ರಾಧಿಕಾರದವರ ಹೆಸರು, ಹುದ್ದೆ, ವಿಳಾಸ, ದೂರವಾಣಿ ಸಂಖ್ಯೆಯನ್ನು ಸೂಚಿಸುವಂತೆ ಕರ್ನಾಟಕ ಸರ್ಕಾರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸುತ್ತೋಲೆಯಲ್ಲಿ ಈಗಾಗಲೆ ನಿರ್ದೇಶನ ನೀಡಿದ್ದಾಗ್ಯೂ ಇದನ್ನು ಬೆ.ವಿ.ಕಂ.ನ ಹಲವು ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಪಾಲಿಸುತ್ತಿಲ್ಲದಿರುವುದು ಆಯೋಗದ ಗಮನಕ್ಕೆ ಬಂದಿರುತ್ತದೆ. ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು ಇನ್ನು ಮುಂದೆ ಬೆ.ವಿ.ಕಂ. ನ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಅರ್ಜಿದಾರರಿಗೆ ಮಾಹಿತಿ ಹಕ್ಕು ಅಧಿನಿಯಮ 2005 ರಡಿಯಲ್ಲಿ ಮಾಹಿತಿ ನೀಡುವಾಗ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು ದೂರವಾಣಿ ಸಂಖ್ಯೆ ಹಾಗು ಮೊದಲ ಮೇಲ್ಮನವಿ ಪ್ರಾಧಿಕಾರದವರ ಹೆಸರು, ಹುದ್ದೆ, ವಿಳಾಸ, ದೂರವಾಣಿ ಸಂಖ್ಯೆಯ ವಿವರಗಳನ್ನು ಕಡ್ಡಾಯವಾಗಿ ನಮೂದಿಸುವಂತೆ ಕಟ್ಟುನಿಟ್ಟಾಗಿ ಸೂಚಿಸಿದೆ.

6/2/13

ಮುಖ್ಯ ಪ್ರಧಾನ ವ್ಯವಸ್ಥಾಪಕರು (ನಿ.ವ್ಯ)

ಪ್ರತಿಗಳು:

1. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಬೆ.ವಿ.ಕಂ. ಬೆಂಗಳೂರು.
2. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯ, ಬೆ.ವಿ.ಕಂ.
3. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಬೆ.ವಿ.ಕಂ. ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಬೆ.ವಿ.ಕಂ.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಬೆ.ವಿ.ಕಂ.
6. ಪೋಲೀಸ್ ಅಧೀಕ್ಷಕರು, ಜಾಗೃತ ದಳ, ಬೆ.ವಿ.ಕಂ.
7. ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಬೆ.ವಿ.ಕಂ, ಬೆಂಗಳೂರು.
8. ಎಲ್ಲಾ ಕಾರ್ಯಾನಿರ್ವಾಹಾಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಬೆ.ವಿ.ಕಂ.
9. ಎಲ್ಲಾ ಸಹಾಯಕ ಕಾರ್ಯಾನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪ ವಿಭಾಗ, ಬೆ.ವಿ.ಕಂ.
10. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ) ರವರ ಆಪ್ತ ಕಾರ್ಯಾದರ್ಶಿಗಳು, ನಿಗಮ ಕಾರ್ಯಾಲಯ, ಬೆ.ವಿ.ಕಂ. ಬೆಂಗಳೂರು.